**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **1786** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಎಂ.ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **23.03.2026** |
| **ಉತ್ತರಿಸುವ ಸಚಿವರು** | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು** |

*****

| **ಕ್ರ. ಸಂ.** | **ಪ್ರಶ್ನೆ** | **ಉತ್ತರ** |
|---|---|---|
| **(ಅ)** | ಈ ಹಿಂದೆ ಅಂದರೆ 2022ರಲ್ಲಿ ಸಿ.ಎ.ಜಿ. ಪ್ರಕಟಿಸಿದ ವರದಿ ಅನುಸಾರ 2022ನೇ ಸಾಲಿನ ಅಂತ್ಯದವರೆಗೆ ರಾಜ್ಯದ ಹಲವಾರು ಸರ್ಕಾರಿ ಆಸ್ಪತ್ರೆಗಳಿಗೆ Fire NOC ಇರುವುದಿಲ್ಲ. ಪ್ರಸ್ತುತ ರಾಜ್ಯದಲ್ಲಿ ಎಷ್ಟು ಆಸ್ಪತ್ರೆಗಳಿಗೆ ಅಗ್ನಿಶಾಮಕ ಸುರಕ್ಷತಾ ಪ್ರಮಾಣಪತ್ರವಿರುತ್ತದೆ ಮತ್ತು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ನಿಯಮಿತವಾಗಿ ಮಾಕ್ ಡ್ರಿಲ್ ನಡೆಸಲಾಗುತ್ತಿದೆಯೇ; | ರಾಜ್ಯದಲ್ಲಿ ಒಟ್ಟು 3476 ಸರ್ಕಾರಿ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ 14 ಸರ್ಕಾರಿ ಆಸ್ಪತ್ರೆಗಳು 21 ಮೀಟರ್ ಗಿಂತ ಎತ್ತರವಿದ್ದು, ಈ 14 ಆಸ್ಪತ್ರೆಗಳಲ್ಲಿ 09 ಕಟ್ಟಡಗಳಿಗೆ ಅಗ್ನಿಶಾಮಕ ಸುರಕ್ಷತಾ ಮಾನದಂಡಗಳನ್ನು ಪೂರೈಸಿ Fire NOC ಪಡೆಯಲಾಗಿರುತ್ತದೆ. ಉಳಿದ 05 ಕಟ್ಟಡಗಳಿಗೆ Fire NOC ಪಡೆಯಲು ಅರ್ಜಿ ಸಲ್ಲಿಸಲಾಗಿರುತ್ತದೆ.<br><br>15 ಮೀಟರ್ ರಿಂದ 21 ಮೀಟರ್ ಒಳಗಿರುವ 24 ಕಟ್ಟಡಗಳಲ್ಲಿ 4 ಕಟ್ಟಡಗಳಿಗೆ ಅಗ್ನಿಶಾಮಕ ಸುರಕ್ಷತಾ ಪ್ರಮಾಣಪತ್ರವಿರುತ್ತದೆ. 15 ಮೀಟರ್ ಗಿಂತ ಕಡಿಮೆ ಎತ್ತರವಿರುವ 3438 ಕಟ್ಟಡಗಳಲ್ಲಿ 217 ಕಟ್ಟಡಗಳಿಗೆ ಅಗ್ನಿಶಾಮಕ ಸುರಕ್ಷತಾ ಪ್ರಮಾಣ ಪತ್ರವಿರುತ್ತದೆ. ಅವುಗಳಲ್ಲಿ ಅಗ್ನಿ ಅವಘಡಗಳ ಸಂದರ್ಭದಲ್ಲಿ ಸಿಬ್ಬಂದಿ ಹಾಗೂ ರೋಗಿಗಳ ಸುರಕ್ಷತೆಯನ್ನು ಖಚಿತಪಡಿಸಲು ಸದರಿ ವರ್ಷದಲ್ಲಿ 2,352 ಆಸ್ಪತ್ರೆಗಳಲ್ಲಿ ಮಾಕ್ ಡ್ರಿಲ್ (Mock Drill) ಗಳನ್ನು ನಡೆಸಲಾಗಿದೆ. ಉಳಿದ ಆಸ್ಪತ್ರೆಗಳಲ್ಲಿ ಕೂಡ ಹಂತ ಹಂತವಾಗಿ ಮಾಕ್ ಡ್ರಿಲ್‌ಗಳನ್ನು ನಡೆಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.<br>ಆದೇಶದ ಸಂಖ್ಯೆ: ಹೆಚ್ ಡಿ 256 ಎಸ್‌ಎಫ್‌ಬಿ 2025(ಭಾಗ-1), ದಿನಾಂಕ 09.01.2026 ರ ಹಾಗು ಆದೇಶ ಸಂ: ಹೆಚ್‌ಡಿ 326 ಎಸ್‌ಎಫ್‌ಬಿ 2025 (ಭಾಗ-1), ದಿನಾಂಕ 24.02.2026 ರ ಅಗ್ನಿಶಾಮಕ ಸುರಕ್ಷತಾ ಕ್ರಮದ ಮಾರ್ಗಸೂಚಿಯ ಪರಿಷ್ಕರಿಸಿದ ಆದೇಶಗಳಂತೆ ಇತರೆ ಎಲ್ಲಾ ಆರೋಗ್ಯ ಸಂಸ್ಥೆಗಳಿಂದ ಅಗ್ನಿಶಾಮಕ ಸುರಕ್ಷತಾ ಪ್ರಮಾಣಪತ್ರ ಪಡೆಯಲು ಕ್ರಮವಹಿಸಲಾಗುತ್ತಿದೆ. |
| **(ಆ)** | 2026-27ನೇ ಆಯವ್ಯಯದಲ್ಲಿ ಆಸ್ಪತ್ರೆಗಳಲ್ಲಿ ಸುರಕ್ಷತಾ ವ್ಯವಸ್ಥೆಗೆ ಎಷ್ಟು ಅನುದಾನ ಒದಗಿಸಲಾಗಿದೆ; ಒಟ್ಟು ಆರೋಗ್ಯ ಇಲಾಖೆಯ ಬಜೆಟ್‌ನಲ್ಲಿ ಪ್ರಾಥಮಿಕ ಆರೋಗ್ಯ ಸೇವೆಗೆ ಶೇಕಡವಾರು ಮೀಸಲು | 2026-27 ನೇ ಸಾಲಿನ ಆಯವ್ಯಯ ಪ್ರಸ್ತುತ ಮಂಡನೆಯಾಗಿದ್ದು, ಆಯವ್ಯಯ ಅನುಮೋದನೆಯಾದ ನಂತರ ಮಾಹಿತಿ ಲಭ್ಯವಾಗುವುದು. |

| | | |
|---|---|---|
| | ಪ್ರಮಾಣವೆಷ್ಟು; | |
| (ಇ) | ರಾಜ್ಯದ ಎಷ್ಟು ಸರ್ಕಾರಿ ಆಸ್ಪತ್ರೆಗಳಲ್ಲಿ ರಕ್ತ ಸಂಗ್ರಹ ಘಟಕಳಿರುವುದಿಲ್ಲ; ಚಿಕಿತ್ಸೆ ಅಥವಾ ತುರ್ತು ಸಮಯದಲ್ಲಿ ರಕ್ತದ ಅಭಾವದಿಂದ ರೋಗಿ ಮೃತಪಟ್ಟರೆ ಅದಕ್ಕೆ ಹೊಣೆಯಾರು; ಈ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ FRU( first Referral Unit) ಗಳಲ್ಲಿ ರಕ್ತ ಸಂಗ್ರಹ ಘಟಕಗಳನ್ನು ಸ್ಥಾಪಿಸಬಹುದಾಗಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ 180 ರಕ್ತ ಸಂಗ್ರಹ ಘಟಕಗಳು ತಾಲ್ಲೂಕು ಆಸ್ಪತ್ರೆ ಮತ್ತು ಸಮುದಾಯ ಕೇಂದ್ರ ಆಸ್ಪತ್ರೆಗಳಲ್ಲಿ ಸೇವೆ ಲಭ್ಯವಿದೆ.<br><br>ಮುಂದುವರೆದು, 50 ಹೊಸ ರಕ್ತ ಸಂಗ್ರಹ ಘಟಕಗಳನ್ನು ಸ್ಥಾಪಿಸಲು KSMSCL ವತಿಯಿಂದ ಟೆಂಡರ್ ಪ್ರಕ್ರಿಯೆ ಮುಗಿಸಿದ್ದು, ಎಲ್ಲಾ ಉಪಕರಣಗಳಿಗೆ ಸರಬರಾಜು ಆದೇಶವನ್ನು ನೀಡಲಾಗಿ ಸರಬರಾಜು ಪ್ರಕ್ರಿಯೆ ಚಾಲ್ತಿಯಲ್ಲಿ ಇರುತ್ತದೆ. ಸದರಿ ರಕ್ತ ಸಂಗ್ರಹ ಘಟಕಗಳನ್ನು ಸ್ಥಾಪಿಸಲು ಅವಶ್ಯವಿರುವ ಆರಂಭಿಕ ತರಬೇತಿಯನ್ನು ದಿನಾಂಕ:03.02.2025, ರಿಂದ 07.02.2025 ರವರೆಗೆ Department of Transfusion Medicine & Hematology, National Institute of Mental Health and Neurosciences (NIMHANS), Bengaluru ಇಲ್ಲಿ ನೀಡಲಾಗಿದೆ.<br><br>2025-26ನೇ ಸಾಲಿನಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ 25 ಹೊಸ ರಕ್ತ ಸಂಗ್ರಹ ಘಟಕಗಳು ಅನುಮೋದನೆಯಾಗಿದ್ದು, ಅವಶ್ಯವಿರುವ ಉಪಕರಣಗಳಿಗೆ KSMSCL ವತಿಯಿಂದ ಟೆಂಡರ್ ಪ್ರಕ್ರೀಯೆ ಚಾಲ್ತಿಯಲ್ಲಿದ್ದು, ಪ್ರಸ್ತುತ ಉಕರಣಗಳ ಪ್ರಾತ್ಯಕ್ಷತೆ (Equipment Demonstration) ದಿನಾಂಕ: 06.03.2026 ರಂದು ಪೂರ್ಣಗೊಂಡಿರುತ್ತದೆ. ಟೆಂಡರ್ ಪ್ರಕ್ರಿಯೆ ಮುಗಿಸಿ ಉಕರಣಗಳ ಸರಬರಾಜಿಗೆ ಕ್ರಮಕೈಗೊಳ್ಳಲಾಗುವುದು. ತುರ್ತು ಸಮಯದಲ್ಲಿ ರಕ್ತದ ಅಭಾವ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದೆ. |

**ಆಕುಕ 49 ಎಸ್‌ಬಿವಿ 2026**

**(ದಿನೇಶ್ ಗುಂಡುರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**